G and WC No. 12/2026

PW-1

ದಿನಾಂಕಃ 01-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ಶ್ರೀ. ವಿ ಸಿ ಪಿ ವಕೀಲರಿಂದ .</u>**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ನನ್ನ ಅಣ್ಣನ ಮಗಳು ಸೌಜನ್ಯ, ಮಗ ರವೀಂದ್ರ, ಮಗಳು ಗಾಯತ್ರಿ ಇವರುಗಳ ಶಾಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-3 ಎಂದು, ನನ್ನ ಅಣ್ಣನ ಹೆಂಡತಿ ವಿಜಯಲಕ್ಷ್ಮೀ, ನನ್ನ ಅಣ್ಣ ಉಮೇಶ ಇವರುಗಳ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು, ನ್ಯಾಯಾಲಯದ ಆದೇಶದ ಪ್ರಕಾರ ಹೊರಡಿಸಲಾದ ನೋಟೀಸಿನ ಪತ್ರಿಕಾ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು, ನನ್ನ ಅಣ್ಣನ ಮಗಳು ಸೌಜನ್ಯ ಹಾಗೂ ನನ್ನ ಆಧಾರ ಕಾರ್ಡ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ನನ್ನ ಅರ್ಜಿಯನ್ನು ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

G and WC No. 12/2026

PW-1

**<u>ಪಾಟೀಸವಾಲುಃ</u>** ಎದುರುದಾರರು ಯಾರು ಇರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.